Ho
Computer

ಕರಾಸಕೈಅನಿನಿ

# ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ನೊಂದಾಯಿತ ಕಛೇರಿ : ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು - 560 010.

ಫೋನ್ : 080-2340 7011 ರಿಂದ 25, ಫ್ಯಾಕ್ಸ್ : 91-080-2314 3566 / 2338 9070 ತಂತಿ : ಮೈಸ್ಮಾಲ್ ಕಾರ್ಪ್

ವೆಬ್‌ಸೈಟ್ : www.kssidc.co.in

ಸಂಖ್ಯೆ:ವಾಣಿಜ್ಯ/ತೂಗು ಸೇತುವೆ/ಕೊಟೇಷನ್ ಪ್ರಕಟಣೆ/2019./05 ದಿನಾಂಕ: 25-05-2019.

## ಪ್ರಕಟಣೆ.

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ಚನ್ನಸಂದ್ರ, ಸ್ಟಾಕ್ ಯಾರ್ಡ್‌ನಲ್ಲಿ ತೂಗು ಸೇತುವೆ ನಿರ್ವಹಣೆಗೆ ಒಂದು ವರ್ಷದ ಅವಧಿಗೆ ಅಂದರೆ 2019-2020 ಸಾಲಿಗೆ ಹಾಗೂ ತೃಪ್ತಿಕರವಾದಲ್ಲಿ ಮುಂದಿನ ಒಂದು ವರ್ಷಕ್ಕೆ ವಿಸ್ತರಿಸುವ ಒಳಪಟ್ಟು ಆಸಕ್ತಿದಾರರಿಂದ ಮೊಹರಾದ ಕೊಟೇಷನ್‌ಗಳನ್ನು ಆಹ್ವಾನಿಸಲಾಗಿದೆ.

ಆಸಕ್ತ ಕೋಟೇಷನ್‌ದಾರರು ರೂ.1000/-(ರೂಪಾಯಿ ಒಂದು ಸಾವಿರ ಮಾತ್ರ) ಮುಂಗಡ ಠೇವಣಿಯನ್ನು "ಕೆ.ಎಸ್.ಎಸ್.ಐ.ಡಿ.ಸಿ."ಲಿ, ಹೆಸರಿನಲ್ಲಿ ರಾಷ್ಟ್ರೀಕೃತ ಬ್ಯಾಂಕಿನಿಂದ ಪಡೆದ ಡಿ.ಡಿ ಜೊತೆಗೆ ಕೊಟೇಷನ್ ಸಲ್ಲಿಸತಕ್ಕದ್ದು. (ಎಲ್ಲಾ ತೆರಿಗೆ ಸೇರಿಸಿ) ಕೊಟೇಷನ್‌ನ ಮೊಹರಾದ ಲಕೋಟೆಯನ್ನು ಸಹಾಯಕ ಪ್ರಧಾನ ವ್ಯವಸ್ಥಾಪಕರು (ಉಗ್ರಾಣ) "ಕೆ.ಎಸ್.ಎಸ್.ಐ.ಡಿ.ಸಿ."ಲಿ, ಚನ್ನಸಂದ್ರ, ಬೆಂಗಳೂರು ರವರಿಗೆ ದಿನಾಂಕ:01.06.2019 ರ ಸಾಯಂಕಾಲ 4.00 ಒಳಗಾಗಿ ಸಲ್ಲಿಸತಕ್ಕದ್ದು. ಸ್ವೀಕೃತವಾದ ಕೊಟೇಷನ್‌ಗಳನ್ನು ದಿನಾಂಕ:01.06.2019 ರಂದು ಸಹಾಯಕ ಪ್ರಧಾನ ವ್ಯವಸ್ಥಾಪಕರು (ಉ) ಚನ್ನಸಂದ್ರ ಬೆಂಗಳೂರು-16. ರವರ ಕಛೇರಿಯಲ್ಲಿ ಸಾಯಂಕಾಲ-4.00 ಗಂಟೆಗೆ ಹಾಜರಿರುವ ಕೊಟೇಷನ್‌ದಾರರ ಸಮ್ಮುಖದಲ್ಲಿ ತೆರೆಯಲಾಗುವುದು. ಅಥವಾ ಸದರಿ ದಿನದಂದು ತೆರೆಯಲಾಗದಿದ್ದಲ್ಲಿ ಮುಂದಿನ ಸಾರ್ವಜನಿಕ ರಜೆ ಹೊರತುಪಡಿಸಿ, ಕೆಲಸದ ದಿನದಂದು ಸಾಯಂಕಾಲ 4.00 ಗಂಟೆಗೆ ಕೊಟೇಷನ್‌ನ ಲಕೋಟೆಗಳನ್ನು ತೆರೆಯಲಾಗುವುದು. ಯಾವುದೇ ಕಾರಣಗಳನ್ನು ನೀಡದೆ, ಕೊಟೇಷನ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೆ.ಎಸ್.ಎಸ್.ಐ.ಡಿ.ಸಿ."ಲಿ, ಬೆಂಗಳೂರು ರವರು ಹೊಂದಿರುತ್ತಾರೆ. ಷರತ್ತು ಮತ್ತು ನಿಬಂಧನೆಗಳು ನಿಗಮದ ವೆಬ್‌ಸೈಟ್ **www.kssidc.co.in** ನಿಂದ **Down load** ಮಾಡಿಕೊಳ್ಳಬಹುದು, ಹಾಗೂ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಸಹಾಯಕ ಪ್ರಧಾನ ವ್ಯವಸ್ಥಾಪಕರು (ಉಗ್ರಾಣ) ಕೆ.ಎಸ್.ಎಸ್.ಐ.ಡಿ.ಸಿ."ಲಿ, ಚನ್ನಸಂದ್ರ ಬೆಂಗಳೂರು ರವರನ್ನು ಮೊಬೈಲ್ ಸಂಖ್ಯೆ: 8884415758 / 8884415878 ಕಛೇರಿ ದೂರವಾಣಿ ಸಂಖ್ಯೆ: 080-25650891 ಮುಖಾಂತರ ಸಂಪರ್ಕಿಸಬಹುದಾಗಿದೆ.

25/5/2019
Mail Sent on 25/5/2019

(ಎಸ್.ಪಿ.ಸುಬ್ಬರಾಮಯ್ಯ) 25/05/19
ಸಹಾಯಕ ಪ್ರಧಾನ ವ್ಯವಸ್ಥಾಪಕರು (ಉಗ್ರಾಣ)
ಚನ್ನಸಂದ್ರ.

ಕೊಟೇಷನ್ ಸಲ್ಲಿಸುವವರು ಈ ಕೆಳಗಿನ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು.

ಷರತ್ತುಗಳು:

1. ಕೊಟೇಷನ್‌ಗಳನ್ನು ಸಹಾಯಕ ಪ್ರಧಾನ ವ್ಯವಸ್ಥಾಪಕರು (ಉಗ್ರಾಣ) ಚನ್ನಸಂದ್ರ ಬೆಂಗಳೂರು-560016. ಇವರ ವಿಳಾಸಕ್ಕೆ ಮೊಹರು ಮಾಡಿದ ಲಕೋಟೆಯಲ್ಲಿ ರೂ.1000/-(ರೂಪಾಯಿ ಒಂದು ಸಾವಿರ ಮಾತ್ರ) ಭದ್ರತಾ ಠೇವಣಿಯನ್ನು "ಕೆ.ಎಸ್.ಎಸ್.ಐ.ಡಿ.ಸಿ" ಹೆಸರಿನಲ್ಲಿ ರಾಷ್ಟ್ರೀಕೃತ ಬ್ಯಾಂಕಿನಿಂದ ಪಡೆದ ಡಿ.ಡಿ ಲಗತ್ತಿಸಿ, ದಿನಾಂಕ: 01.06.2019 ರಂದು ಸಾಯಂಕಾಲ 4.00 ಗಂಟೆಯೊಳಗೆ ಸಲ್ಲಿಸತಕ್ಕದ್ದು. ದರಗಳನ್ನು (ಎಲ್ಲಾ ಶಾಸನ ಬದ್ಧ ತೆರಿಗೆಗಳು ಸೇರಿ)ಸಂಖ್ಯೆ ಮತ್ತು ಅಕ್ಷರಗಳಲ್ಲಿ ನಮೂದಿಸತಕ್ಕದ್ದು, ಮುಂಗಡ ಠೇವಣಿಯನ್ನು ಲಗತ್ತಿಸದೆ ಸಲ್ಲಿಸುವ ಕೊಟೇಷನ್‌ಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ.
2. ಲಕೋಟೆಯ ಮೇಲೆ "ಚನ್ನಸಂದ್ರ ಉಗ್ರಾಣದಲ್ಲಿ ತೂಗು ಸೇತುವೆ ನಿರ್ವಹಣೆ ಕಾರ್ಯಕ್ಕೆ ಕೊಟೇಷನ್" ಎಂದು ನಮೂದಿಸತಕ್ಕದ್ದು.
3. ದಿನಾಂಕ: 01.06.2019 ರ ಸಾಯಂಕಾಲ 4.00 ಗಂಟೆಯ ತರುವಾಯ ಬಂದ ಕೊಟೇಷನ್‌ಗಳನ್ನು ಯಾವುದೇ ಕಾರಣಕ್ಕೂ ಸ್ವೀಕರಿಸಲಾಗುವುದಿಲ್ಲ.
4. ಸ್ವೀಕೃತವಾದ ಕೊಟೇಷನ್‌ಗಳನ್ನು ದಿನಾಂಕ:01.06.2019 ರಂದು ಸಹಾಯಕ ಪ್ರಧಾನ ವ್ಯವಸ್ಥಾಪಕರು,(ಉ) ಚನ್ನಸಂದ್ರ ಬೆಂಗಳೂರು-560016 ಅವರ ಕಛೇರಿಯಲ್ಲಿ ಸಾಯಂಕಾಲ 4.00 ಗಂಟೆಗೆ ಹಾಜರಿರುವ ಕೊಟೇಷನ್‌ದಾರರ ಸಮ್ಮುಖದಲ್ಲಿ ತೆರೆಯಲಾಗುವುದು. ಅಥವಾ ಸದರಿ ದಿನದಂದು ಕೊಟೇಷನ್‌ಗಳನ್ನು ತೆರೆಯಲಾಗದಿದ್ದಪಕ್ಷದಲ್ಲಿ ಮುಂದಿನ ಸಾರ್ವಜನಿಕ ರಜೆ ಹೊರತುಪಡಿಸಿ, ಕೆಲಸ ದಿನದಂದು ಸಾಯಂಕಾಲ-4.00 ಗಂಟೆಗೆ ಕೊಟೇಷನ್ ಲಕೋಟೆಗಳನ್ನು ತೆರೆಯಲಾಗುವುದು.
5. ಅಂಗೀಕರಿಸಲ್ಪಟ್ಟ ಕೊಟೇಷನ್‌ದಾರರು ಕಾರ್ಯಾದೇಶವನ್ನು ಪಡೆದ ಒಂದು ವಾರದ ಒಳಗಾಗಿ ರೂ 100/-ರ ಛಾಪಾ ಕಾಗದದಲ್ಲಿ ಕರಾರು ಪತ್ರ ಸಲ್ಲಿಸಿ, ಕೆಲಸವನ್ನು ಪ್ರಾರಂಭಿಸತಕ್ಕದ್ದು. ಈ ಗುತ್ತಿಗೆಯು ಕಾರ್ಯಾದೇಶ ಪಡೆದ ದಿನಾಂಕದಿಂದ ಒಂದು ವರ್ಷದ ಅವಧಿವರೆಗೆ ಚಾಲ್ತಿಯಲ್ಲಿರುತ್ತದೆ.
6. ಸೇವಾದಾರರ ಸೇವೆಯು ತೃಪ್ತಕರವಾದಲ್ಲಿ ಮುಂದಿನ ಒಂದು ವರ್ಷಕ್ಕೆ ವಿಸ್ತರಿಸಲಾಗುವುದು.
7. ಕೊಟೇಷನ್‌ದಾರರು ಪ್ರಸ್ತುತ ಕೆಲಸದಲ್ಲಿ ಹೊಂದಿರುವ ಅನುಭವದ ದಾಖಲೆಯನ್ನು ಕೊಟೇಷನ್‌ನೊಂದಿಗೆ ಲಗತ್ತಿಸತಕ್ಕದ್ದು.

ಮುಂದುವರೆಯುವುದು.

8. ಅಯಶಸ್ವಿ ಕೊಟೇಷನ್‌ದಾರರ ಮುಂಗಡ ಠೇವಣಿಯ ಡಿಮಾಂಡ್ ಡ್ರಾಫ್ಟ್‌ಗಳನ್ನು ಕೊಟೇಷನ್ (ದರಗಳಪಟ್ಟಿ) ತೆರೆಯುವ ದಿನದಂದು ಹಿಂದಿರುಗಿಸಲಾಗುವುದು. ಯಶಸ್ವಿ ಕೋಟೇಷನ್‌ದಾರರು ಕಾರ್ಯಾದೇಶ ಪಡೆದು ಗುತ್ತಿಗೆ ಕೆಲಸ ನಿರ್ವಹಿಸಲು ವಿಫಲರಾದಲ್ಲಿ ಸದರಿಯವರು ಪಾವತಿಸಿದ ಮುಂಗಡ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಹಾಗೂ ಕಪ್ಪು ಪಟ್ಟಿಗೆ ಸೇರಿಸಲಾಗುವುದು. ಇಂತಹ ಸಂದರ್ಭದಲ್ಲಿ ಎರಡನೇ ಕಡಿಮೆ ದರ ಹಾಗೂ ಅನುಭವ ಹೊಂದಿರುವ ಕೊಟೇಷನ್‌ದಾರರಿಗೆ ಗುತ್ತಿಗೆಯನ್ನು ನೀಡಲಾಗುವುದು.
9. ಕೊಟೇಷನ್‌ಗಳನ್ನು ಒಪ್ಪಿಕೊಳ್ಳುವ ಇಲ್ಲವೆ ತಿರಸ್ಕರಿಸುವ ಅಥವಾ ಕೊಟೇಷನ್ ಪ್ರಕ್ರಿಯೆಯನ್ನು ಯಾವುದೇ ಕಾರಣ ನೀಡದೇ ರದ್ದುಪಡಿಸುವ ಅಧಿಕಾರ ನಿಗಮದ ವ್ಯವಸ್ಥಾಪಕ ನಿರ್ದೇಶಕರು ಹೊಂದಿರುತ್ತಾರೆ.
10. ಹೆಚ್ಚಿನ ಮಾಹಿತಿಗಾಗಿ ಸಹಾಯಕ ಪ್ರಧಾನ ವ್ಯವಸ್ಥಾಪಕರು(ಉಗ್ರಾಣ)ಚನ್ನಸಂದ್ರ ಬೆಂಗಳೂರು-16 ಇವರನ್ನು ಕಛೇರಿ ವೇಳೆಯಲ್ಲಿ ದೂರವಾಣಿ ಸಂಖ್ಯೆ: 080/25650891 ಅಥವಾ ಮೊಬೈಲ್ ಸಂಖ್ಯೆ:8884415758/ 8884415878 ಮೂಲಕ ಸಂಪರ್ಕಿಸಬಹುದಾಗಿದೆ.
11. ಷರತ್ತು ಬದ್ಧ ಕೊಟೇಷನ್‌ಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ.

S.P. Subbaramaiah 25/05/19
(ಎಸ್.ಪಿ.ಸುಬ್ಬರಾಮಯ್ಯ)
ಸಹಾಯಕ ಪ್ರಧಾನ ವ್ಯವಸ್ಥಾಪಕರು (ಉಗ್ರಾಣ)
ಚನ್ನಸಂದ್ರ.